

# ‘ತೀರ್ಥೀಕುರ್ವಂತಿ ತೀರ್ಥಾನಿ’

**ಸ್ವಾಮಿ ಮುಕ್ತಿದಾನಂದ**

ಭಾರತೀಯ ಸಂಸ್ಕೃತಿಯಲ್ಲಿ ತೀರ್ಥಕ್ಷೇತ್ರಗಳಿಗೆ ಹಾಗೂ ತೀರ್ಥಯಾತ್ರೆಗೆ ವಿಶೇಷವಾದ ಮಹತ್ವವಿದೆ. ನಿಜವಾದ ತೀರ್ಥಯಾತ್ರೆ ಹೇಗೆ ಮತ್ತು ಅದನ್ನು ಸಾರ್ಥಕಗೊಳಿಸುವುದು ಹೇಗೆ ಎಂಬ ವಿಷಯವನ್ನು ಕುರಿತಂತೆ ಚಿಂತಿಸಿರುವ ಪೂಜ್ಯ ಸ್ವಾಮೀಜಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು ಹಾಗೂ ‘ವಿವೇಕಪ್ರಭ’ದ ವ್ಯವಸ್ಥಾಪಕ ಸಂಪಾದಕರು. ರಾಮಕೃಷ್ಣ ಮಹಾಸಂಘದ ವಿಶ್ವಸ್ತ ಮಂಡಲಿಯ ಸದಸ್ಯರಾಗಿರುವ ಅವರು ಉತ್ತಮ ಚಿಂತಕರೂ, ಪ್ರವಚನಕಾರರೂ, ಲೇಖಕರೂ ಆಗಿದ್ದಾರೆ.

ತೀರ್ಥಕ್ಷೇತ್ರಗಳು ಯಾತ್ರಿಗಳಾಗಿ ಬಂದವರ ಮೇಲೆ ಆಧ್ಯಾತ್ಮಿಕವಾಗಿ ಪ್ರಭಾವವನ್ನು ಬೀರಿ ಮನಸ್ಸನ್ನು ಉನ್ನತ ಸ್ತರಕ್ಕೆ ಕೊಂಡೊಯ್ಯುತ್ತವೆ ಎಂಬುದು ಸನಾತನ ಧರ್ಮದ ಶ್ರದ್ಧಾವಂತ ಭಕ್ತರು ನಿರ್ವಿವಾದವಾಗಿ ನಂಬಿಕೊಂಡು ಬಂದ ವಾಸ್ತವ ಸಂಗತಿ ಮಾತ್ರವಲ್ಲ; ಅನುಭವಗಮ್ಯ ಪ್ರಕ್ರಿಯೆ.

## ತೀರ್ಥಯಾತ್ರೆಯ ವೈಶಿಷ್ಟ್ಯ

ತಮ್ಮ ಸಾಧನೆಯಿಂದ ಆಧ್ಯಾತ್ಮಿಕವಾಗಿ ಜಾಗೃತಗೊಂಡು, ದೈವಾನುಭವ ಪಡೆದ ಸಂತಶ್ರೇಷ್ಠರು ಇಂತಹ ತೀರ್ಥಕ್ಷೇತ್ರಗಳಿಗೆ ಬಂದು, ವಾಸ್ತವ್ಯ ಹೂಡುವುದರಿಂದ ಮತ್ತು ತಮ್ಮ ತಪಃಶಕ್ತಿಯನ್ನು ಅಲ್ಲಿ ಸ್ಥಾಪಿಸುವುದರಿಂದ ಅವು ಇನ್ನೂ ಹೆಚ್ಚು ಪಾವನಗೊಳ್ಳುತ್ತವೆ ಹಾಗೂ ಸಶಕ್ತಗೊಳ್ಳುತ್ತವೆ. ಈ ಕ್ಷೇತ್ರವನ್ನು ಸಂದರ್ಶಿಸುವ ಶ್ರದ್ಧಾವಂತ ಯಾತ್ರಿಗಳ ಹೃನ್ಮನಗಳ ಮೇಲೆ ಅಲ್ಲಿ ಬಂದು ನೆಲೆಸಿ ಹೋಗುವ, ನೂರಾರು ಸಂತರು ಜಾಗೃತಗೊಳಿಸಿದ ಭಗವತ್‌ಶಕ್ತಿಯ ಆವಿರ್ಭಾವವು ಸೂಕ್ಷ್ಮವಾದ ಮತ್ತು ಪ್ರಭಾವಶಾಲಿಯಾದ ಸತ್ಪರಿಣಾಮವನ್ನು ಬೀರುತ್ತದೆ. ಈ ದೈವೀಪ್ರಭಾವದಿಂದ ಯಾತ್ರಿಗಳ ಪಾಪವು ಕ್ಷಯಿಸುತ್ತದೆ. ಅವರ ಜೀವನವು ಆಧ್ಯಾತ್ಮಿಕವಾಗಿ ಪ್ರಗತಿಯ ಪಥದಲ್ಲಿ ವಿಕಾಸಹೊಂದುತ್ತದೆ. ಈ ನಂಬಿಕೆಯು ಸನಾತನ ಸಂಸ್ಕೃತಿಯಲ್ಲಿ, ನಮ್ಮ ಜನಮಾನಸದಲ್ಲಿ ನೂರಾರು ವರ್ಷಗಳಿಂದ ಹರಿದುಬಂದು, ತೀರ್ಥಯಾತ್ರಾ ಸಂಕಲ್ಪವನ್ನು ಮತ್ತು ಅಭೀಪ್ಸೆಯನ್ನು ಮತ್ತಷ್ಟು ವರ್ಧಿಸಿದೆ.

‘ತೀರ್ಥ’ ಎಂಬ ಶಬ್ದದ ವ್ಯುತ್ಪತ್ತಿಯು ಹೀಗಿದೆ: **ತೀರ್ಯತೇ ಅನೇನ ಇತಿ ತೀರ್ಥಂ ಸಂಸಾರ ಸಾಗರಾತ್ ತಾರಣ ಉಪಾಯ ಭೂತಮ್** ಎಂಬುದಾಗಿ ತಿಳಿದುಬರುತ್ತದೆ. ಅಂದರೆ, ಸಂಸಾರ ಸಾಗರವನ್ನು ದಾಟಲು ನೆರವಾಗುವ ಮತ್ತು ಮುಕ್ತಿಮಾರ್ಗಕ್ಕೆ ನಮ್ಮನ್ನು ಕೊಂಡೊಯ್ಯುವ ಸಾಧನ ಎಂದು ಅರ್ಥ.

ಆದ್ದರಿಂದ ನಮ್ಮ ತೀರ್ಥಕ್ಷೇತ್ರಗಳನ್ನು ಆಧ್ಯಾತ್ಮಿಕ ಶಕ್ತಿಯ ಪ್ರಸರಣ ಕೇಂದ್ರಗಳು ಎನ್ನಬಹುದು. ಇವು ನಮ್ಮ ಪೂರ್ವಜರು ತಮ್ಮ ತಪಸ್ಸು, ಪರಿಶ್ರಮಗಳಿಂದ ನಮಗಾಗಿ ನೀಡಿರುವ ಅಮೂಲ್ಯ

ವಾದ, ದೊಡ್ಡ ಧಾರ್ಮಿಕ ಆಸ್ತಿ. ತೀರ್ಥಕ್ಷೇತ್ರಗಳು ಭಕ್ತರನ್ನೂ, ಯಾತ್ರಿಗಳನ್ನು ಆಧ್ಯಾತ್ಮಿಕವಾಗಿ charge ಮಾಡಲು ಸ್ಥಾಪಿತವಾಗಿರುವ power centres ಅಥವಾ Spiritual Charger ಎನ್ನಬಹುದು. ನಮ್ಮ ನಿತ್ಯಜೀವನದ ನಿರ್ವಹಣೆಗೆ ಜಲಸಂಪನ್ಮೂಲಗಳಾದ ಜಲಾಶಯಗಳು ಎಷ್ಟು ಜೈವಿಕವಾಗಿ ಆವಶ್ಯಕವೋ, ತೀರ್ಥಕ್ಷೇತ್ರಗಳೂ ಕೂಡಾ ದುರಿತ ಬಾಧೆಗಳ ತಾಪವನ್ನು ತಗ್ಗಿಸಿ, ಪುಣ್ಯವನ್ನು ವರ್ಧಿಸಿ, ಭಕ್ತರ ಮನಸ್ಸನ್ನು ಪವಿತ್ರಗೊಳಿಸಿ, ಭಗವಂತನೆಡೆಗೆ ಕೇಂದ್ರೀಕೃತಗೊಳಿಸಲು ಅಷ್ಟೇ ಆವಶ್ಯಕ. ಆದ್ದರಿಂದ 'ತೀರ್ಥೀಕುರ್ವಂತಿ ತೀರ್ಥಾನಿ' ಎಂಬ ಶಾಸ್ತ್ರವಾಕ್ಯದ *(ಶ್ರೀಮದ್ ಭಾಗವತ, ೧:೧೩:೧೦)* ತಾತ್ಪರ್ಯವೇನೆಂದರೆ ಸಂತರು, ಸಾಧಕರು ಮತ್ತೆ ಮತ್ತೆ ಸಂದರ್ಶಿಸಿ, ಇಲ್ಲಿ ಸಾಧನೆ, ತಪಸ್ಸನ್ನು ಗೈಯ್ಯುವುದರಿಂದ, ತೀರ್ಥಕ್ಷೇತ್ರಗಳು ಆಧ್ಯಾತ್ಮಿಕವಾಗಿ ಪದೇ ಪದೇ ಪುನಶ್ಚೇತನಗೊಳ್ಳುತ್ತಾ ಧರ್ಮಜೀವನವನ್ನು ನಿರಂತರವಾಗಿ ಪ್ರವಹಿಸುವ ಹಾಗೂ ಪ್ರೇರೇಪಿಸುವ Spiritual Reservoir ಆಗಿ ಮಾರ್ಪಟ್ಟು, ವಿಶೇಷವಾದ ಧಾರ್ಮಿಕ ಸೇವೆಯನ್ನು ಸಲ್ಲಿಸುತ್ತವೆ.

ತೀರ್ಥಕ್ಷೇತ್ರಗಳು ನಮ್ಮ ದೇಶದ ಉದ್ದಗಲಕ್ಕೂ ವ್ಯಾಪಿಸಿವೆ. ಉತ್ತರ ಹಿಮಾಲಯದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೆ ಮತ್ತು ಪೂರ್ವದ ಪುರಿ ಜಗನ್ನಾಥ ಕ್ಷೇತ್ರದಿಂದ ಪಶ್ಚಿಮದ ಸೋಮನಾಥ ಕ್ಷೇತ್ರದವರೆಗೆ ವ್ಯಾಪಿಸಿವೆ. ತೀರ್ಥಯಾತ್ರೆಗಳ ಪ್ರಾಮುಖ್ಯತೆ ಮತ್ತು ಮಾಹಾತ್ಮ್ಯಗಳಿಗೆ ಅನುಸಾರವಾಗಿ ಅವುಗಳನ್ನು ವಿವಿಧ ರೀತಿಯಲ್ಲಿ ವಿಂಗಡಿಸಲಾಗಿದೆ:

**ಮೊದಲನೆಯ ವಿಭಾಗೀಕರಣ:**

೧. ಕುಲದೇವತಾ ದರ್ಶನ ಯಾತ್ರೆ.

೨. ಪಿತೃಯಜ್ಞ ದೇವಸ್ಥಾನಗಳು. ಉದಾಹರಣೆಗೆ – ಗಯಾ ಗದಾಧರ ದೇವಸ್ಥಾನ.

೩. ಪ್ರಾಯಶ್ಚಿತ್ತಕ್ಕಾಗಿ ಪರಿಹಾರಕ್ಷೇತ್ರಗಳು – ಕಾಶಿ, ರಾಮೇಶ್ವರ ಮೊದಲಾದವುಗಳು.

೪. ಪುರುಷಾರ್ಥ ಧರ್ಮಕ್ಕಾಗಿರುವ ಕ್ಷೇತ್ರಗಳು – ತಿರುಪತಿ, ಮಂತ್ರಾಲಯ ಮೊದಲಾದವುಗಳು.

**ಎರಡನೆಯ ವಿಭಾಗೀಕರಣ:**

ಸ್ಕಾಂದಪುರಾಣದ ಪ್ರಕಾರ ಮೂರು ವಿಧ:

೧. ಜಂಗಮ ತೀರ್ಥಗಳು.

೨. ಸ್ಥಾವರ ತೀರ್ಥಗಳು: ಇವು ಸ್ಥಾಯಿಯಾಗಿ ಒಂದೇ ಕಡೆ ಇರುವ ಕ್ಷೇತ್ರಗಳು – ಹರಿದ್ವಾರ, ಕೈಲಾಸ ಪರ್ವತ, ವಾರಾಣಸಿ ಮತ್ತು ಗಂಗೆ, ಯಮುನೆ ಮೊದಲಾದ ನದಿಗಳು.

೩. ಮಾನಸ ತೀರ್ಥಗಳು – ಅಂದರೆ ನಮ್ಮ ಮನಸ್ಸಿನಲ್ಲೇ ಇರುವ, ನಮ್ಮನ್ನು ಪವಿತ್ರಗೊಳಿಸುವ ಮಹಾನ್ ಸದ್ಗುಣಗಳು – ಸತ್ಯ, ದಾನ, ಸಹನೆ ಮತ್ತು ಅನುಕಂಪ.

ನೂರಾರು ವರ್ಷಗಳ ಹಿಂದೆ ನಿರ್ಮಾಣಗೊಂಡು ಜನರನ್ನು ಆಕರ್ಷಿಸುತ್ತಿರುವ ಈ ಪುಣ್ಯಕ್ಷೇತ್ರಗಳು ಇಂದಿಗೂ ಅಜರಾಮರವಾಗಿ ಉಳಿದು, ಲಕ್ಷಾಂತರ ಜನಸಾಮಾನ್ಯರ ಧರ್ಮಶ್ರದ್ಧೆಯನ್ನು ವರ್ಧಿಸುವುದರಲ್ಲಿ ವಹಿಸಿರುವ ಪಾತ್ರ ಅನನ್ಯವಾದುದು. ಈ ತೀರ್ಥಕ್ಷೇತ್ರಗಳಲ್ಲಿ ಪ್ರವಹಿಸುವ ಶಕ್ತಿಯು ಜನಸಾಮಾನ್ಯರ ಪರಿವರ್ತನೆಗೆ ಅತ್ಯಂತ ಸಹಕಾರಿಯಾಗಿದೆ. ಆದುದರಿಂದ ತೀರ್ಥಕ್ಷೇತ್ರಗಳು ನಮ್ಮ ಸನಾತನ ಧರ್ಮಸಂಸ್ಕೃತಿಯು ಜನಸಾಮಾನ್ಯರಿಗೆ ಕರುಣಿಸಿದ ಒಂದು ದೊಡ್ಡ ವರ ಮತ್ತು ಸಾರ್ವತ್ರಿಕವಾದ ಆಧ್ಯಾತ್ಮಿಕ ಸಾಧನ ಮತ್ತು ಶ್ರದ್ಧಾಕೇಂದ್ರಗಳು ಎಂದು ಪರಿಗಣಿಸಬಹುದು.

**ತೀರ್ಥಕ್ಷೇತ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಆವಶ್ಯಕತೆ**

ಈ ತೀರ್ಥಕ್ಷೇತ್ರಗಳನ್ನು ಯೋಗ್ಯರೀತಿಯಲ್ಲಿ ನಿರ್ವಹಿಸಿ, ಅವಗಳನ್ನು ಸ್ವಚ್ಛ ಹಾಗೂ ಸುಂದರವಾಗಿರಿಸಿ ಯಾತ್ರಿಗಳಿಗೆ ಆವಶ್ಯಕ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸರ್ಕಾರದ ಮತ್ತು ನಮ್ಮೆಲ್ಲರ ಸಾಮೂಹಿಕ ಜವಾಬ್ದಾರಿಯಾಗಿದೆ. ಇತ್ತೀಚೆಗೆ ಪುನರ್ ನಿರ್ಮಾಣಗೊಂಡ ತಿರುಪತಿ, ಕೂಡಲಸಂಗಮ, ಕಾಶಿ ಕ್ಷೇತ್ರಗಳಂತೆ ನಮ್ಮ ಎಲ್ಲಾ ತೀರ್ಥಕ್ಷೇತ್ರಗಳು ಯಾತ್ರಾರ್ಥಿಗಳಿಗೆ ಆವಶ್ಯಕ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕು.

**ತೀರ್ಥಯಾತ್ರೆಯ ಅರ್ಹತೆ**

ಸನಾತನ ಧರ್ಮಕ್ಕೆ ಸೇರಿದ ಎಲ್ಲಾ ಜಾತಿ, ಕುಲ ಗೋತ್ರದವರೂ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ, ಅದರಿಂದ ಆಧ್ಯಾತ್ಮಿಕ ಮತ್ತು ಧಾರ್ಮಿಕ ಪ್ರಯೋಜನವನ್ನು ಪಡೆಯಬಹುದು ಎಂದು ಮತ್ಸ್ಯಪುರಾಣವು ಸ್ಪಷ್ಟವಾಗಿ ನಿರ್ದೇಶಿಸುತ್ತದೆ. *(೧೮೪.೬೬, ೬೭)*

**ತೀರ್ಥಯಾತ್ರೆಯ ಪೂರ್ವಸಿದ್ಧತೆ ಮತ್ತು ಅನುಸರಿಸಬೇಕಾದ ನಿಯಮಗಳು**

ತೀರ್ಥಯಾತ್ರೆ ಕೈಗೊಳ್ಳುವ ಮೊದಲು ಅಗತ್ಯವಾಗಿ ಕೆಳಗೆ ತಿಳಿಸಿರುವ ಪೂರ್ವಸಿದ್ಧತೆಗಳನ್ನು ಮಾಡಿಕೊಂಡು ಆರಂಭಿಸಿದರೆ, ಯಾತ್ರೆಯು ಪರಿಣಾಮಕಾರಿಯಾಗಿ ಸಫಲವಾಗುವುದು.

೧. ಯಾತ್ರೆಯನ್ನು ಪ್ರಾರಂಭಿಸುವ ಮೊದಲು ತೀರ್ಥಕ್ಷೇತ್ರದ ಮಹತ್ವಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಓದಿ ಹಾಗೂ ತೀರ್ಥಯಾತ್ರೆ ಮಾಡಿದ ಅನುಭವಗಳಿಂದ ವಿಷಯಗಳನ್ನು ಕೇಳಿ ತಿಳಿದುಕೊಳ್ಳಬೇಕು.

೨. ಅಲ್ಲಿನ ಪ್ರಮುಖ ದೇವಸ್ಥಾನಗಳನ್ನು ಸಂದರ್ಶಿಸಿ, ಅಲ್ಲಿನ ಒಂದು ಶಾಂತವಾದ ವಾತಾವರಣದಲ್ಲಿ ಕುಳಿತು, ಶಾಸ್ತ್ರಚಿಂತನೆ, ಪಾರಾಯಣ, ಪ್ರಾರ್ಥನೆ, ಜಪ-ಧ್ಯಾನವನ್ನು ಸಾಧ್ಯವಾದಷ್ಟು ಸಮಯ ಮಾಡುತ್ತಾ, ಅಲ್ಲಿಯ ದಿವ್ಯ ಆಧ್ಯಾತ್ಮಿಕ ತರಂಗಗಳಿಗೆ ನಮ್ಮ ಮನಸ್ಸನ್ನು ತೆರೆಯಬೇಕು.

೩. ಪುಣ್ಯಕ್ಷೇತ್ರಗಳಲ್ಲಿನ ಪ್ರಮುಖ ಆರಾಧ್ಯದೇವತೆಯನ್ನು ಮಾನಸಿಕವಾಗಿ ಪ್ರಾರ್ಥಿಸಿ, ಧ್ಯಾನಿಸಿ, ಪೂಜಿಸಬೇಕು.

೪. ತೀರ್ಥಕ್ಷೇತ್ರದಲ್ಲಿ ತಂಗಿದ್ದಾಗ ಬಿಡುವಿನ ಸಮಯದಲ್ಲಿ ಅಲ್ಲಿಯ ಮಾಹಾತ್ಮ್ಯವನ್ನು ತಿಳಿಸುವ ಪುಸ್ತಕಗಳನ್ನು ಓದಿ ಚಿಂತನೆ

ಮಾಡಬೇಕು. ಇದರಿಂದ ಕ್ಷೇತ್ರದ ಮಾಹಾತ್ಮ್ಯದ ಅರಿವು ಮನಸ್ಸಿನಲ್ಲಿ ಸದಾ ಮೂಡುತ್ತದೆ.

೫. ಅಲ್ಲಿಯ ಪ್ರಮುಖ ಪುಣ್ಯನದಿ, ಸರೋವರ, ಪುಷ್ಕರಿಣಿ, ಜಲಾಶಯದಲ್ಲಿ ಪ್ರತಿದಿನ ಅಥವಾ ಒಂದು ಬಾರಿಯಾದರೂ ತೀರ್ಥಸ್ನಾನವನ್ನು ಮಾಡಬೇಕು ಮತ್ತು ಪ್ರತಿದಿನ ಪವಿತ್ರಜಲವನ್ನು ಪ್ರೋಕ್ಷಿಸಿಕೊಳ್ಳಬೇಕು.

೬. ತೀರ್ಥಕ್ಷೇತ್ರಗಳಲ್ಲಿ ನೆಲೆಸಿರುವ ಪ್ರಮುಖ ಸಾಧು-ಸಂತರನ್ನು ಸಂದರ್ಶಿಸಿ, ಅವರ ಸತ್ಸಂಗವನ್ನು ಪಡೆಯಬೇಕು ಹಾಗೂ ಅವಕಾಶ ದೊರೆತಲ್ಲಿ ಕಿಂಚಿತ್ ಅವರ ಸೇವೆ ಮಾಡಬೇಕು.

೭. ತೀರ್ಥಕ್ಷೇತ್ರಗಳಿಗೆ ಹೋದಾಗ ಅಲ್ಲಿ ದಾನ, ಬಡವರ ಸೇವೆ, ಸಂತರ ಸೇವೆ ಮೊದಲಾದ ಸತ್ಕರ್ಮಗಳನ್ನು ಮಾಡುವುದರಿಂದ ಪುಣ್ಯವು ಪ್ರಾಪ್ತವಾಗುವುದು ಮತ್ತು ಮನಸ್ಸಿನಲ್ಲಿ ಉತ್ತಮ ಸಂಸ್ಕಾರಗಳು ನಿರ್ಮಾಣಗೊಂಡು, ಮನಸ್ಸು ಶುದ್ಧವೂ, ಪವಿತ್ರವೂ ಆಗುವುದು.

೮. ಈ ಕ್ಷೇತ್ರದಲ್ಲಿ ತಂಗಿದ್ದಾಗ ಪರನಿಂದೆ, ಪರಪೀಡೆ, ದೋಷಾರೋಪಣೆ ಮುಂತಾದ ಪಾಪ ಕರ್ಮಗಳನ್ನು ದೃಢವಾಗಿ ವರ್ಜಿಸಬೇಕು.

ಹೀಗೆ ಭಾರತ ದೇಶದ ಕೆಲವು ಮುಖ್ಯತೀರ್ಥಕ್ಷೇತ್ರಗಳನ್ನು ಗುರುತಿಸಿ, ತಮ್ಮ ತಮ್ಮ ಅನುಕೂಲ ಮತ್ತು ಧರ್ಮಶ್ರದ್ಧೆಯ ಅನುಸಾರವಾಗಿ ತೀರ್ಥಯಾತ್ರೆಯನ್ನು ಯೋಜಿಸಿ, ಒಂದಾದ ಮೇಲೆ ಇನ್ನೊಂದನ್ನು ಅನುಕ್ರಮವಾಗಿ ಕೈಗೊಳ್ಳಬೇಕು.

ಇವುಗಳೆಲ್ಲವನ್ನು ಶ್ರದ್ಧಾಭಕ್ತಿಯಿಂದ ಅನುಸರಿಸಿದರೆ, ನಮ್ಮ ತೀರ್ಥಯಾತ್ರೆಯು ಆಧ್ಯಾತ್ಮಿಕವಾಗಿಯೂ, ಲೌಕಿಕವಾಗಿಯೂ ಅತ್ಯಂತ ಪ್ರಯೋಜನಕಾರಿಯೂ, ಪುನಃಶ್ಚೇತನಕಾರಿಯೂ ಆಗುವುದು. ಧರ್ಮಪ್ರಜ್ಞೆಯ ಜಾಗೃತಿ ಮತ್ತು ವಿಕಾಸದಿಂದ ನಮ್ಮ ಜೀವನವು ಉಜ್ಜೀವನವಾಗುವುದು.

ತೀರ್ಥಯಾತ್ರೆಯ ಜೊತೆಜೊತೆಗೆ ಧರ್ಮಶ್ರದ್ಧೆಯಿಂದ ಒಡಗೂಡಿದ ಶಿಸ್ತುಬದ್ಧ, ನೈತಿಕ ಜೀವನವನ್ನು ನಡೆಸುವುದು ಮುಖ್ಯ. ತೀರ್ಥಯಾತ್ರೆಯು ನಮ್ಮ ಕ್ಲೇಶಗಳನ್ನು ಕಳೆದು ಪಾಪವನ್ನು ನಾಶಮಾಡುವುದು ಎಂದು ತಿಳಿದು ಮತ್ತೆ ಮತ್ತೆ ಪಾಪಕಾರ್ಯಗಳಲ್ಲಿ ತೊಡಗುವುದು ಅನುಚಿತವೂ, ಹಾನಿಕರವೂ ಆಗಿದೆ. ಅದಕ್ಕಿಂತ ಶಾಸ್ತ್ರವಿದಿತವಾದ – ಕ್ಷಮೆ, ದಯೆ, ದಮ ಮುಂತಾದ ಮಾನಸಿಕ ತೀರ್ಥಕ್ಷೇತ್ರಗಳಿಗೆ ಸಮಾನವಾದ ದೈವೀಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಚಿತ್ತಶುದ್ಧಿಯಾಗಿ, ತೀರ್ಥಯಾತ್ರೆ ಮಾಡಿದಷ್ಟೇ ಪುಣ್ಯವು ಲಭಿಸುವುದು.

ಆದ್ದರಿಂದ ದಯೆ, ಕ್ಷಮೆ, ದಮ ಮತ್ತು ಇನ್ನಿತರ ದೈವೀಗುಣಗಳು ಮಾನಸಿಕ ತೀರ್ಥಕ್ಷೇತ್ರಗಳೆಂದು ಪರಿಗಣಿಸಲ್ಪಟ್ಟಿವೆ. ತೀರ್ಥಯಾತ್ರೆಯ ಬಗ್ಗೆ ಸನಾತನ ಸಂಸ್ಕೃತಿಯ ನಿಲುವು ಉದಾತ್ತವಾಗಿದೆ. ನಿಜವಾದ, ಶ್ರದ್ಧಾವಂತ ಸಾಧಕರಿಗೆ ತೀರ್ಥಯಾತ್ರೆಯು ಕಡ್ಡಾಯವಲ್ಲ. ತಾವಿರುವ ಸ್ಥಳದಲ್ಲಿಯೇ ಆಂತರ್ಯದಲ್ಲಿ ಸೂಕ್ಷ್ಮವಾದ ಆಧ್ಯಾತ್ಮಿಕ ಸಾಧನೆಯನ್ನೂ, ಯೋಗಜೀವನವನ್ನೂ ನಡೆಸಲು ಸಮರ್ಥರಾದ ಶ್ರದ್ಧಾವಂತರಿಗೆ ತೀರ್ಥಯಾತ್ರೆಯು ಅನಿವಾರ್ಯವಲ್ಲ ಎಂದು ಹೇಳಬಹುದು.

ಶ್ರೀರಾಮಕೃಷ್ಣ ಪರಮಹಂಸರು ಈ ಸಂಬಂಧವಾಗಿ ಒಂದು ಬಂಗಾಲಿ ಹಾಡಿನ ಮೂಲಕ ತೀರ್ಥಯಾತ್ರೆಯ ಬಗ್ಗೆ ತಮ್ಮ ಭಾವನೆಯನ್ನು ಆಗಾಗ ವ್ಯಕ್ತಪಡಿಸುತ್ತಿದ್ದರು:

ಕಾಳಿ, ಕಾಳಿ, ಕಾಳಿ ಎಂಬ ಅಜಪಾ-ಜಪವು
ಅಂತಃಕರಣದಲ್ಲಿ ಸ್ಫುರಿಸುತ್ತಿರಲು,
ಗಯೆ, ಗಂಗೆ, ಪ್ರಭಾಸ, ಕಾಶಿ, ಕಾಂಚಿ
ಮೊದಲಾದ ತೀರ್ಥ ಕ್ಷೇತ್ರಗಳ ಯಾತ್ರೆ ಯಾಕೆ ಬೇಕು?



ಈ ಸಂದರ್ಭದಲ್ಲಿ ಆದಿಶಂಕರಾಚಾರ್ಯರು ತಮ್ಮ ಶಿಷ್ಯರಾದ ಸ್ವಾಮಿ ಪದ್ಮಪಾದರಿಗೆ ತೀರ್ಥಯಾತ್ರೆಯ ಬಗ್ಗೆ ಕೊಟ್ಟ ಸೂಚನೆಗಳು ಸೂಕ್ತವಾಗಿದ್ದು, ಅದನ್ನು ತಿಳಿದುಕೊಳ್ಳುವುದು ಆವಶ್ಯಕ. ಒಮ್ಮೆ ಪದ್ಮಪಾದರು ತಮ್ಮ ಗುರುಗಳಾದ ಶಂಕರಾಚಾರ್ಯರೊಡನೆ ತೀರ್ಥಯಾತ್ರೆಗೈಯ್ಯುವುದಕ್ಕೆ ತೆರಳಲು ಅವರ ಅನುಮತಿಯನ್ನು ಕೇಳಿದರು. ಶಂಕರಾಚಾರ್ಯರು ಆಗ ಪದ್ಮಪಾದರಿಗೆ ಹೀಗೆ ಹೇಳಿದರು : ''ಸದ್ಗುರುನ ಸಾಮೀಪ್ಯವೇ ನಿಜವಾದ ತೀರ್ಥಕ್ಷೇತ್ರ; ಅವರ ಚರಣಕಮಲವನ್ನು ತೊಳೆದ ನೀರೇ ಪುಣ್ಯತೀರ್ಥ. ಆದ್ದರಿಂದ ಸದ್ಗುರುವಿನ ಉಪದೇಶದಂತೆ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದು ಎಲ್ಲರೂ ಹಂಬಲಿಸುವ ತೀರ್ಥಕ್ಷೇತ್ರದಲ್ಲಿರುವ ಆರಾಧ್ಯ ದೇವತೆಯ ದಿವ್ಯ ಸಾನ್ನಿಧ್ಯದಂತೆ. ನಿಜವಾಗಿ ಗುರುವಿನ ಸಾಮೀಪ್ಯದಲ್ಲಿದ್ದು ಗುರುಸೇವೆಯನ್ನು ಮಾಡುವುದು ತೀರ್ಥಭ್ರಮಣಕ್ಕಿಂತ ಹೆಚ್ಚಿನ ಸಂಗತಿಯಾಗಿದೆ.''

ಸನಾತನ ಧರ್ಮದಲ್ಲಿ ತೀರ್ಥಯಾತ್ರೆ ಎಂಬುದು ಕಡ್ಡಾಯದ ಕಟ್ಟುಪಾಡಲ್ಲ. ಯಾವುದು ನಮ್ಮ ಮನಸ್ಸನ್ನು ಶುದ್ಧೀಕರಿಸಿ, ವಿವೇಕವನ್ನು ಜಾಗೃತಗೊಳಿಸಿ, ಆತ್ಮಸಾಕ್ಷಾತ್ಕಾರಕ್ಕೆ ಅನುವು ಮಾಡಿಕೊಡುವುದೋ ಅದು ಮುಖ್ಯ. ತೀರ್ಥಕ್ಷೇತ್ರವಾಗಲೀ, ಏಕಾಕಿಯಾಗಿದ್ದು ನಿರ್ಜನಪ್ರದೇಶದಲ್ಲಿ ಸಾಧನೆಮಾಡುವುದಾಗಲೀ ಅಥವಾ ಗುರುಸೇವೆಯನ್ನು ಗೈಯ್ಯುತ್ತಾ, ಗುರು ಹೇಳಿದ ಸಾಧನೆಯನ್ನು ಆಶ್ರಮವಾಸಿಯಾಗಿ ಮಾಡುವುದು ಎಲ್ಲವೂ ಆತ್ಮಜ್ಞಾನಕ್ಕೆ ನಮ್ಮ ಮನಸ್ಸನ್ನು ಸಿದ್ಧಗೊಳಿಸಲು ಸಹಕಾರಿಯಾಗಬೇಕು. ಇದು ತೀರ್ಥಯಾತ್ರೆಯ ಮತ್ತು ಇತರ ಎಲ್ಲಾ ಸಾಧನಾ ಪಥಗಳ ಆತ್ಯಂತಿಕ ಉದ್ದೇಶ.